

# ರಂಗೋಲಿಗೆ ಕುಂದಣ ಕುಂದನ್

**ಬಣ್ಣ ಬಣ್ಣದ ರಂಗೋಲಿ ಹಬ್ಬಗಳ ಜತೆಗೆ ತಳುಕು ಹಾಕಿಕೊಂಡಿವೆ. ಆಕರ್ಷಕವಾದ ಕುಂದನ್ ರಂಗೋಲಿಯಲ್ಲಿ 'ಟಿಯರ್ ಡ್ರಾಪ್' ವಿನ್ಯಾಸ ಮನಮೋಹಕವಾದದ್ದು.**

■ ಚಿತ್ರ– ಬರಹ: ಎಸ್ಸೆಚ್

ಹಿಂದೂ ಹಬ್ಬಗಳು ಬಣ್ಣ ಬಣ್ಣದ ರಂಗೋಲಿ ಕಲೆಯ ಜೊತೆ ತಳುಕು ಹಾಕಿಕೊಂಡಿವೆ. ಮನೆಯ ಮುಂದೆ ಎಷ್ಟೇ ಚಿಕ್ಕ ಜಾಗವಿದ್ದರೂ ನೀರು ಚಿಮುಕಿಸಿ, ನಾಲ್ಕೆಳೆ ರಂಗೋಲಿ ಗೆರೆ ಎಳೆದು ಕೆಮ್ಮಣ್ಣು, ಅರಿಷಿಣ, ಕುಂಕುಮ ತುಂಬಿದರೆ ಮನಸ್ಸಿಗೆ ಮುದವಾಗದೇ ಇರದು. ಆಧುನಿಕತೆ ಮನೆ– ಮನಗಳಲ್ಲಿ ಹೊಕ್ಕಿರುವ ಈ ದಿನಗಳಲ್ಲಿ ಸಾಂಪ್ರದಾಯಕ ರಂಗೋಲಿಯೂ ಆಧುನಿಕ ಸ್ಪರ್ಶ ಕಂಡಿದೆ.

ರಂಗೋಲಿಗೆ ನಾವೀನ್ಯತೆ ತುಂಬಿ ಅಂದ– ಚೆಂದಕ್ಕೆ ಇನ್ನಷ್ಟು ಕುಂದಣವಿಟ್ಟಿರುವ ಕುಂದನ್ ಈಗ ಪ್ರಚಲಿತವಾದ ಕಲೆ. ಪ್ಲಾಸ್ಟಿಕ್ ಹರಳು, ಮಣಿ, ಮುತ್ತುಗಳಿಂದ ಅಲಂಕರಿಸಿ, ವಿವಿಧ ಆಕಾರ, ವಿನ್ಯಾಸಗಳಲ್ಲಿ ಇನ್ನಷ್ಟು ಮೈದುಂಬುವಂತೆ ಮಾಡುವ ಈ ರಂಗೋಲಿ ವೈವಿಧ್ಯ 'ರೆಡಿ ಟು ಡಿಸ್‌ಪ್ಲೇ' ರಂಗೋಲಿ ಎನ್ನಬಹುದು. ನೆಲದ ಮೇಲೆ ಜಾಗವಿಲ್ಲದಿದ್ದರೆ, ಗೋಡೆಯನ್ನೂ ಅಲಂಕರಿಸಬಹುದು.



ಸ್ವರ್ಣಾ ಮೂರ್ತಿ

'ಈ ಕುಂದನ್ ಹರಳುಗಳು, ಮುತ್ತು ಮೊದಲಾದವುಗಳನ್ನು ಒಎಚ್‌ಪಿ ಪ್ಲಾಸ್ಟಿಕ್ ಹಾಳೆ ಮೇಲೆ ಫೆವಿ ಗ್ಲೂನಿಂದ ಕೂರಿಸುವುದಕ್ಕೆ ತಾಳ್ಮೆ ಬೇಕು' ಎನ್ನುತ್ತಾರೆ ಹಲವು ವರ್ಷಗಳಿಂದ ಈ ಕಲೆಯನ್ನು ರೂಢಿಸಿಕೊಂಡಿರುವ ಬೆಂಗಳೂರಿನ ಸ್ವರ್ಣಾ ಮೂರ್ತಿ.

ಈ ಕುಂದನ್ ರಂಗೋಲಿಯಲ್ಲಿ 'ಟಿಯರ್ ಡ್ರಾಪ್' ವಿನ್ಯಾಸ ಮನಮೋಹಕವಾದದ್ದು. ಸಣ್ಣ ಚಿನ್ನದ ಬಣ್ಣದ ಮಣಿಯ ಎರಡೂ ಸಾಲುಗಳ ಮಧ್ಯೆ ಬಿಳಿ ಮುತ್ತನ್ನು ಕೂರಿಸಿ, ನಡುವೆ ಹಸಿರು ಹಾಗೂ ಗುಲಾಬಿ ರಂಗಿನ ಹೊಳಪಿನ ರೈನ್‌ಸ್ಟೋನ್ ಫಿಕ್ಸ್ ಮಾಡಿದರೆ ಸಾಕು, ಈ ಎಲೆಯ ವಿನ್ಯಾಸ ಎದ್ದು ಕಾಣುತ್ತದೆ.

ವೃತ್ತಾಕಾರದಲ್ಲಿ ಕೆಂಪು, ನೀಲಿ ಅಲಂಕಾರಿಕ ಹರಳು ಕೂರಿಸಿ, ಅದಕ್ಕೆ ಚಿನ್ನದ ಮಣಿಗಳ ಬಾರ್ಡರ್ ಕೊಟ್ಟರೆ ಕಾಂಟ್ರಾಸ್ಟ್ ವರ್ಣಗಳಿಂದ ತನ್ನದೇ ಚೆಲುವನ್ನು ಬೀರುತ್ತದೆ. ಗೌರಿಹಬ್ಬ, ನವರಾತ್ರಿ, ದೀಪಾವಳಿ, ಸಂಕ್ರಾಂತಿ ಮೊದಲಾದ ಹಬ್ಬಗಳಂದು ಈ ರಂಗೋಲಿಗಳನ್ನು ದೇವರ ಮಂಟಪದ ಮುಂದೆ ಅಂದವಾಗಿ ಜೋಡಿಸಿ ಮಧ್ಯೆ ದೀಪಗಳ ಹಣತೆಗಳನ್ನಿಟ್ಟರೆ ಹಬ್ಬದ ಸಂಭ್ರಮ ಇಮ್ಮಡಿಯಾಗದೆ ಇರದು.

ಈ ಪಾರದರ್ಶಕ ಪ್ಲಾಸ್ಟಿಕ್ ಹಾಳೆಗಳ ಮೇಲೆ ವಿನ್ಯಾಸ ಮಾಡಿದ ನಂತರ ದಪ್ಪ ಕಾಗದದ ಮೇಲೆ ನಮಗೆ ಬೇಕಾದ ರೀತಿಯಲ್ಲಿ ಜೋಡಿಸಿದರೆ ಕಾಗದದ ರಂಗಿನ ಹಿನ್ನೆಲೆಯಲ್ಲಿ ಕುಂದನ್ ರಂಗೋಲಿ ಎದ್ದು ಕಾಣುತ್ತದೆ. ಜೊತೆಗೆ ಕೊಳೆಯಾಗುವುದನ್ನು ತಪ್ಪಿಸಬಹುದು.

'ಕ್ರಾಫ್ಟ್ ಅಂಗಡಿಗಳಲ್ಲಿ ಈ ರಂಗೋಲಿಗೆ ಬೇಕಾದ ಹರಳು, ಮುತ್ತು, ಶೀಟ್ ಮೊದಲಾದ ಸಾಮಗ್ರಿಗಳು ಸಿಗುತ್ತವೆ' ಎನ್ನುವ ಸ್ವರ್ಣಾ ಅವರು, ಮಾಡಿದ ಕುಂದನ್ ರಂಗೋಲಿಗಳನ್ನು ಸರಿಯಾಗಿ ಕಾದಿಡುವುದೂ ಒಂದು ಕಲೆಯೇ ಎನ್ನುತ್ತಾರೆ. ಸ್ವರ್ಣಾ ಅವರು ಅನಂತನ ಗಂಟನ್ನೂ ಅಂದವಾಗಿ ಮಾಡುವ ಕಲೆ ಸಿದ್ಧಿಸಿಕೊಂಡಿದ್ದಾರೆ. ಅನಂತನ ಚತುರ್ದಶಿಯಂದು ಇದನ್ನು ಇಟ್ಟು, ಅಲಂಕರಿಸುವ ಸಂಪ್ರದಾಯವಿದೆ. ■